ಕರ್ನಾಟಕ ವಿಧಾನ ಪರಿಷತ್ತು

1.	ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	84 (491)
2.	ಸದಸ್ಯರ ಹೆಸರು	:	ಶ್ರೀ ತಿಪ್ಪಣ್ಣ ಕಮಕನೂರ (ನಾಮ ನಿರ್ದೇಶನ ಹೊಂದಿದವರು)
3.	ಉತ್ತರಿಸಬೇಕಾದ ದಿನಾಂಕ	:	10-03-2020
4.	ಉತ್ತರಿಸುವ ಸಚಿವರು	:	ಮಾನ್ಯ ನಗರಾಭಿವೃದ್ಧಿ ಸಚಿವರು.

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಕಲಬುರಗಿ ನಗರಕ್ಕೆ ನೀರು ಸರಬರಾಜು ಮಾಡುವ ಮೂಲಗಳೆಷ್ಟು; ಅವು ಯಾವುವು;	ಕಲಬುರಗಿ ನಗರಕ್ಕೆ ಈ ಕೆಳಕಂಡ 3 ನೀರಿನ ಮೂಲಗಳಿರುತ್ತವೆ: 1) ಭೋಸ್ಗಾ ಕೆರೆ. 2) ಬೆಣ್ಣೆತೋರಾ ನದಿ. 3) ಭೀಮಾ ನದಿ.
ಆ)	ಈ ಮೂಲಗಳಿಂದ ಎಷ್ಟು ಪ್ರಮಾಣದಲ್ಲಿ ನೀರು ಸರಬರಾಜು ಆಗುತ್ತಿದೆ;	ಭೀಮಾ ನದಿಯಿಂದ ಪ್ರತಿದಿನ 55 ಎಮ್.ಎಲ್ ಹಾಗೂ ಬೆಣ್ಣೆತೋರಾ ನದಿಯಿಂದ 20 ಎಮ್.ಎಲ್. ಒಟ್ಟು 75 ಎಮ್.ಎಲ್ ಕುಡಿಯುವ ನೀರನ್ನು ಪ್ರತಿದಿನ ಸರಬರಾಜು ಮಾಡಲಾಗುತ್ತಿದೆ. ಬೋಸ್ಗಾ ಕೆರೆಯಲ್ಲಿ ನೀರಿನ ಸಂಗ್ರಹಣೆ ಇದ್ದಾಗ, ಬೇಸಿಗೆ ಕಾಲದಲ್ಲಿ ಪ್ರತಿದಿನ 7 ರಿಂದ 8 ಎಮ್.ಎಲ್ ನೀರನ್ನು ಸರಬರಾಜು ಮಾಡಲಾಗುತ್ತಿದೆ.
ಇ)	ನಗರದ ಕುಡಿಯುವ ನೀರಿನ ಬೇಡಿಕೆ ಎಷ್ಟು;	ಕಲಬುರಗಿ ನಗರದ ಪ್ರಸ್ತುತ 6,00,000 ಜನಸಂಖ್ಯೆಗೆ ಕುಡಿಯುವ ನೀರಿನ ಬೇಡಿಕೆಯು 93 ದಶಲಕ್ಷ ಲೀಟರ್ ಇರುತ್ತದೆ.
ಈ)	ನಗರದ ಕುಡಿಯುವ ನೀರಿನ ಸಮಸ್ಯೆಯನ್ನು ಶಾಶ್ವತವಾಗಿ ಪರಿಹರಿಸುವುದಕ್ಕೆ ಕೈಗೊಂಡಿರುವ ಕ್ರಮಗಳೇನು?	ಕಲಬುರಗಿ ನಗರದ ಕುಡಿಯುವ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ ಒದಗಿಸಲು ವಿಶ್ವಬ್ಯಾಂಕ್ ನೆರವಿನಿಂದ ಕೆಯುಡಬ್ಲ್ಯೂಎಸ್ಎಂಪಿ ಯೋಜನೆಯಡಿ 24/7 ನಿರಂತರ ನೀರು ಸರಬರಾಜು. ಯೋಜನೆಯನ್ನು ಕೆಯುಐಡಿಎಫ್‌ಸಿ ವತಿಯಿಂದ ಕೈಗೊಳ್ಳಲಾಗುತ್ತಿದೆ. ಈ ಯೋಜನೆಯಡಿ ಬೆಣ್ಣೆತೋರಾ ಜಲಾಶಯದಿಂದ 55 ಎಂ.ಎಲ್.ಡಿ ಹೆಚ್ಚುವರಿ ನೀರನ್ನು ನಗರಕ್ಕೆ ಸಾಗಿಸಿ ಶುದ್ಧೀಕರಿಸಿ ದಿನಂಪ್ರತಿ ತಲಾ 135 ಲೀಟರ್‌ನಂತೆ ಒದಗಿಸಲು ಉದ್ದೇಶಿಸಿದ್ದು, 2024 ರೊಳಗೆ ಚಾಲನೆಗೊಳಿಸಲು ಉದ್ದೇಶಿಸಿದೆ. **ಕಾಮಗಾರಿಯ ಅಂದಾಜು ವೆಚ್ಚದ ವಿವರಗಳು:** ವಿನ್ಯಾಸ ಹಾಗೂ ನಿರ್ಮಾಣ ಅಂದಾಜು ಮೊತ್ತ: — ರೂ.453.00 ಕೋಟಿಗಳು 11.5 ವರ್ಷಗಳ ನಿರ್ವಹಣಾ ಅಂದಾಜು ಮೊತ್ತ — ರೂ.289.20 ಕೋಟಿಗಳು ಒಟ್ಟು ಮೊತ್ತ — ರೂ.742.20 ಕೋಟಿಗಳು ಕಾಮಗಾರಿ ಗುತ್ತಿಗೆಯನ್ನು Design-Build-Operate-Transfer (DBOT) ಮಾದರಿಯಲ್ಲಿ ನೀಡಲು ಸರ್ಕಾರದ ಆದೇಶ ಸಂಖ್ಯೆ: ನಅಇ 279 ಪಿಆರ್‌ಜೆ 2018 ದಿನಾಂಕ:

		22.10.2018 ರಲ್ಲಿ ಅನುಮೋದನೆ ನೀಡಲಾಗಿದೆ. ಅದರಂತೆ ಬಿಡ್ ದಸ್ತಾವೇಜುಗಳಿಗೆ ವಿಶ್ವಬ್ಯಾಂಕಿನ ಅನುಮೋದನೆ ದೊರೆತಿದ್ದು, ಟೆಂಡರ್‌ನ್ನು ಕರೆಯಲಾಗಿದೆ. ವಿಶ್ವಬ್ಯಾಂಕಿನಿಂದ ತಾಂತ್ರಿಕ ಬಿಡ್ಡಿನ ಮೌಲ್ಯಮಾಪನ ವರದಿಗೆ ದಿನಾಂಕ: 05.02.2020 ರಂದು ನಿರಾಕ್ಷೇಪಣೆ ಪತ್ರ ದೊರೆತಿರುತ್ತದೆ. ಆರ್ಥಿಕ ಬಿಡ್ಡನ್ನು ದಿನಾಂಕ:11.02.2020 ರಂದು ತೆರೆಯಲಾಗಿರುತ್ತದೆ. ತಾಂತ್ರಿಕವಾಗಿ ಅರ್ಹರಾಗಿರುವ ಏಕಮಾತ್ರ ಗುತ್ತಿಗೆದಾರರಾದ ಮೆ॥ ಎಲ್&ಟಿ ಲಿಮಿಟೆಡ್ ರವರ ಆರ್ಥಿಕ ಬಿಡ್ಡಿನ ಮೌಲ್ಯಮಾಪನ ಪ್ರಕ್ರಿಯೆ ಪ್ರಗತಿಯಲ್ಲಿದೆ.

ನಅಇ 56 ಪಿ.ಆರ್.ಜೆ 2020

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು.